ಅಪೂರ್ವಳಿಗೆ ಆತಂಕಕ್ಕಿಟ್ಟುಕೊಂಡಿತ್ತು.

'ನೀವೇನು ಚಿಂತೆ ಮಾಡ್ಬೇಡಿ.. ನಾನು ಒಂದು ತಾಸು ಮುಂಚೇನೇ ಬಂದು ವೈದ್ಯರ ಬಳಿ ಎಲ್ಲಾ ವಿವರಿಸಿ ಹೇಳಿದ್ದೀನಿ.. ಸೂರ್ಯನ ಹಿನ್ನೆಲೆ ಬಗ್ಗೆ.. ಹಾಗಾಗಿ ಅವ್ರು ಯೋಚಿಸಿ ಪ್ರಶ್ನೆ ಕೇಳ್ತಾರೆ..'

'ಹೌದಾ? ಒಳ್ಳೇದಾಯಿತು.. ಆದ್ರೂ.... ಸೂರ್ಯನಿಗೆ ನಮ್ಮ ಮುಂದೆ ತನ್ನ ಅನಿಸಿಕೆ ವ್ಯಕ್ತಪಡಿಸಲು ಮುಜುಗರವಾಗಬಹುದು... ಈ ವೈದ್ಯರು ತುಂಬಾ ಹೆಸರುವಾಸಿ.. ಮನಸಲ್ಲೇನಿದೆ ಅಂತ ತಿಳ್ಕೊಂಡು ಪರಿಹಾರ ಕೊಡ್ತಾರೆ ಬಿಡಿ..' ಅಪೂರ್ವಳ ತಳಮಳ ಕಂಡು ಆದರ್ಶ ಒಳಗೇ ಕರುಬಿದ. ಆದರೆ ಅದನ್ನು ಅವಳ ಮುಂದೆ ತೋಡಿಕೊಳ್ಳದಾದ. ಒಂದೂವರೆ ತಾಸಿನ ನಂತರ ಸೂರ್ಯ ಹೊರಗೆ ಬಂದಿದ್ದ. ಅವನ ಮುಖಭಾವವನ್ನು ಅಳೆಯುವಂತೆ ಅಪೂರ್ವ ದೀರ್ಘವಾಗಿ ದಿಟ್ಟಿಸಿದಳು. ಅವನಲ್ಲಿ ಯಾವ ಬದಲಾವಣೆಯೂ ಕಾಣದಾಗ ಆದರ್ಶ, ಅಪೂರ್ವ ಪರಸ್ಪರ ಮುಖ ನೋಡಿಕೊಂಡರು.

'ಸೂರ್ಯ.. ನೀವಿಲ್ಲೇ ಕೂತಿರಿ.. ಡಾಕ್ಟ್ರ ಫೀಸು ಕೊಟ್ಟು ಬರ್ತೀನಿ..' ಅಪೂರ್ವ ಒಳನಡೆದಾಗ ಆದರ್ಶನೂ ಅವಳೊಂದಿಗೆ ಹೆಜ್ಜೆ ಹಾಕಿದ.

ಡಾ.ಮುರಳಿ ಇವರನ್ನು ಕಂಡು ಸ್ನೇಹದ ನಗೆ ಬೀರಿದರು. ಅವರ ಮುಖದ ವರ್ಚಸ್ಸು, ಗಾಂಭೀರ್ಯವೇ, ಅವರ ಪಾಂಡಿತ್ಯ ಅನುಭವವನ್ನು ಸಾರಿ ಹೇಳುತ್ತಿತ್ತು.

'ಡಾಕ್ಟರ್... ಏನಾದ್ರೂ.. ಸಾಧ್ಯವಾಯಿತೇ..?' ಆದರ್ಶ ಕಾತುರದಿಂದ ಕೇಳಿದ.

'ನಾನು ಗಮನಿಸಿದಂತೆ ಸೂರ್ಯನಿಗೆ ತನ್ನ ಬಗ್ಗೆ ಕೀಳರಿಮೆ ಇದೆ. ಇದರಿಂದ ಆತ್ಮವಿಶ್ವಾಸದ ಕೊರತೆಯಾಗಿದೆ' ಡಾ.ಮುರಳಿ ನುಡಿದಾಗ ಅಪೂರ್ವ ತಲೆಯಾಡಿಸುತ್ತ 'ನಿಜ ಸಾರ್.. ಸೂರ್ಯ ಹೆಚ್ಚಾಗಿ ಒಂಟಿಯಾಗಿರ್ತಾರೆ, ಆದಷ್ಟು ಒಂಟಿಯಾಗಿರಲು ಬಿಡಬೇಡಿ.. ಏನಾದ್ರೂ ಕೆಲಸದಲ್ಲಿ ತೊಡಗಿಸಿಕೊಳ್ಳಲಿ'

'ಹೌದು.. ಅವ್ರ ತಂದೆ ವ್ಯವಹಾರ ನೋಡಿಕೊಳ್ಳಲು ತಿಳಿಸಿದರೆ ತನ್ನಿಂದ ಸಾಧ್ಯವಾಗದು ಎಂಬಂತೆ ಮಾತನಾಡ್ತಾರೆ. ಡಾಕ್ಟರ್.. ಇಲ್ಲಿಗೆ ಕರೆತಂದಿರುವ ಉದ್ದೇಶ ಅದೇ.. ಅವರ ಆತ್ಮವಿಶ್ವಾಸ ಪ್ರಚೋದಿಸುವ ಕೆಲಸ ಆಗ್ಬೇಕಾಗಿದೆ'

'ಅದಿಕ್ಕೆ.. ಅವ್ರು ಮಾಡುವ ಸಣ್ಣ ಸಣ್ಣ ಕೆಲಸಗಳನ್ನು ಶ್ಲಾಘಿಸಿ.. ಕೆಲಸ ಮಾಡಲೊಪ್ಪದಿದ್ದರೆ.. ಖಾಲಿ ಕೂರುವುದಕ್ಕಿಂತ ಓದಿನಲ್ಲಿ ಮನಸ್ಸನ್ನು ತೊಡಗಿಸಿಕೊಳ್ಳಬಹುದು.. ಎಂಥ ತುಕ್ಕು ಹಿಡಿದ ಮನಸ್ಸನ್ನೂ ಕೂಡಾ ಓದು ಸರಿಪಡಿಸಬಲ್ಲದು. ವ್ಯಕ್ತಿತ್ವ ವಿಕಸನದಂಥ ಪುಸ್ತಕಗಳು ಪರಿಣಾಮಕಾರಿ ಯಾಗಬಲ್ಲದು' ಅವರ ಸಲಹೆ ಬಹಳ ಉಪಯುಕ್ತವೆನಿಸಿತು ಅಪೂರ್ವಳಿಗೆ. ಅವರ ಮುಂದಿನ ಭೇಟಿಯ ಸಮಯ ನಿಗದಿಪಡಿಸಿಕೊಂಡು ಅವರ ಫೀಸು ನೀಡಿ ಹೊರ ಬಂದರು.

'ಇವತ್ತಿನ್ನೂ ಮೊದಲ ಭೇಟಿ.. ಸೂರ್ಯನಿಗೆ ನಾನು ಸಂಪೂರ್ಣವಾಗಿ ಅಪರಿಚಿತ.. ಮೊದಲ ಭೇಟಿಯಲ್ಲೇ ಮನ ಬಿಚ್ಚಿ ಮಾತನಾಡಲು ಸಾಧ್ಯವಾಗಲಿಲ್ಲ. ನಮ್ಮಿಬ್ಬರ ನಡುವಿನ ಸಂಕೋಚದ ತೆರೆ ಸರಿಯಬೇಕು. ಇವತ್ತಿನದ್ದು ಕೇವಲ ಸೌಹಾರ್ದ ಭೇಟಿಯಷ್ಟೇ.. ಮುಂದಿನ ಸಂದರ್ಶನದಲ್ಲಿ ಪೀಠಿಕೆ ಹಾಕೋಣ.. ಸೂರ್ಯ ಸ್ವಲ್ಪ ಸಂಕೀರ್ಣ ವ್ಯಕ್ತಿ ಅನ್ಸುತ್ತೆ.. ಅಷ್ಟು ಅನಾಯಾಸವಾಗಿ ಏನನ್ನೂ ಬಾಯಿ ಬಿಡಲಾರ'

* * *

## ಅಧ್ಯಾಯ15

ಅಪೂರ್ವ ಮತ್ತು ಆದರ್ಶ ವೈದ್ಯರ ಕೋಣೆಯಿಂದ ನಗುತ್ತ, ಮಾತನಾಡುತ್ತ ಹೊರ ಬಂದಾಗ ಹೊರಗೆ ಕುರ್ಚಿಯಲ್ಲಿ ಕುಳಿತಿದ್ದ ಸೂರ್ಯನಿಗೆ ಕಸಿವಿಸಿಯುಂಟಾಗಿತ್ತು.

ತಾನೇಕೆ ಇಲ್ಲಿಗೆ ಬಂದೆ? ತನಗೇನಾಗಿದೆ ಎಂದು ತಾನು ವೈದ್ಯರ ಬಳಿ ಬರಬೇಕು? ತಾನು ಸರಿಯಾಗೇ ಇದ್ದೀನಿ.. ಈ ಅಪೂರ್ವಳ ಮಾತು ಕೇಳಿ ತಾನು ಬರಬಾರದಿತ್ತು. ಆದರೆ, ಅವಳ ಮಾತುಗಳನ್ನು ತಳ್ಳಿ ಹಾಕಲು ತನಗೆ ಮನಸ್ಸೇ ಬರುವುದಿಲ್ಲ. ಅವಳು ತನ್ನ ಒಳಿತಿಗಾಗಿ ಹೇಳುತ್ತಾಳೆ, ತನ್ನ ಹಿತಚಿಂತಕಿ ಯಾಗಿ, ಮಾರ್ಗದರ್ಶಕಿಯಾಗಿ ನಡೆಯುತ್ತಾಳೆಂದು ತನ್ನ ಅಂತರಂಗ ಅಂಗೀಕರಿಸಿದ್ದಾಗಿದೆ. ಅವಳ ಮನಸ್ಸು ಶುದ್ಧವೆಂದು ತನಗೆ ಎಂದೋ ಅರಿವಾಗಿತ್ತು. ಅಂದು ಅಪ್ಪ ಆಸ್ಪತ್ರೆಯಲ್ಲಿದ್ದಾಗ ತನ್ನನ್ನು ಕೂಡಿ ಹಾಕಿದರೂ, ತಾನು ಹಸಿವಿನಿಂದ ಕಂಗೆಟ್ಟಿರಬಹುದೆಂದು ತನಗೆ ಊಟ ಹಿಡಿದು ಬಂದಿದ್ದಳು. ಆದರೆ ತಾನು, ಅವಳು ತನ್ನನ್ನು ಕೂಡಿ ಹಾಕಿದ್ದಾಳೆನ್ನುವ ಸಿಟ್ಟಿಗೆ ಅವಳ ಮೇಲೆ ಅಮಾನವೀಯವಾಗಿ ಹಲ್ಲೆ ನಡೆಸಿದೆ. ತಾನು ಮನೆಯಿಂದ ಹಣ ಕದ್ದೊಯ್ದರೂ, ಅದನ್ನು ಯಾರ ಬಳಿಯೂ ಇದುವರೆಗೂ ತಿಳಿಸಿರಲಿಲ್ಲ. ಬದಲಿಗೆ ತನ್ನನ್ನು ಹುಡುಕಿಸಿ ಆ ಹಣ ಪಡೆದು ತನ್ನನ್ನು ಮತ್ತೆ ಮನೆ ಸೇರುವಂತೆ ಮಾಡಿದ್ದಳು. ನೆರೆಹೊರೆಯವರು ತನ್ನ ಬಗ್ಗೆ ತುಚ್ಛವಾಗಿ ಮಾತನಾಡಿ ತನ್ನ ಹೆತ್ತವರನ್ನು ತಲೆತಗ್ಗಿಸುವಂತೆ ಮಾಡಿದಾಗ ತಾನು ಭೂಮಿಗಿಳಿದು ಹೋಗಿದ್ದೆ. ಅವಮಾನದಿಂದ ಮುಖವೆತ್ತದಂತಾದಾಗ ಮತ್ತೆ ಬೆಂಬಲಕ್ಕೆ ನಿಂತಿದ್ದು ಇದೇ ಅಪೂರ್ವ.. ಈಗ ಮತ್ತೆ ತನಗೆ ಒತ್ತಾಸೆಯಾಗಿ ನಿಂತು ತನ್ನಲ್ಲಿ ಕುಂದಿದ ಆತ್ಮಬಲವನ್ನು ಮರಳಿಸುವ ಯತ್ನ ನಡೆಸುತ್ತಿದ್ದಾಳೆ. ಕೆಲವರು ಹೀಗೆ ಜೀವನದಲ್ಲಿ ವರವಾಗಿ ದೊರಕುತ್ತಾರೆ. ಇನ್ನು ಕೆಲವರು ಶಾಪವಾಗಿ!

ಅಪೂರ್ವ ತನ್ನ ಜೊತೆಯಾಗಿ ಸದಾ ಇದ್ದರೆ, ತನ್ನ ಬದುಕು ಎಷ್ಟೊಂದು ಸೊಗಸು! ಆದರೆ ಆ ಯೋಗ್ಯತೆ ತನಗಿದೆಯೇ? ತನ್ನಂಥವನ ಬಗ್ಗೆ ಅವಳಲ್ಲಿ ಅನುಕಂಪ, ಕಾಳಜಿ ಇದ್ದೀತೇ ಹೊರತು ಅದಕ್ಕಿಂತ ಮಿಗಿಲಾದ ಭಾವನೆ ಇರಲಾರದು. ಆದರ್ಶನಂಥ ವಿದ್ಯಾವಂತ ವಿಚಾರವಂತನೇ ಅವಳಿಗೆ ಯೋಗ್ಯನೇ ಹೊರತು ತನ್ನಂಥವನ ಕೈಗೆ ನಿಲುಕದ ನಕ್ಷತ್ರ ಈ ಅಪೂರ್ವ!

ಆದರ್ಶ್ ತನ್ನ ಕಾರಿನಲ್ಲಿ ಇವರನ್ನು ಮನೆಗೆ ತಂದು ಬಿಟ್ಟು ಹೊರಟು ಹೋಗಿದ್ದ.

ಅಪೂರ್ವ ಮರುದಿನ ಕಾಲೇಜಿನಿಂದ ಹಿಂತಿರುಗುವಾಗ ಪುಸ್ತಕ ಕೇಂದ್ರಕ್ಕೆ ಹೋಗಿ ಡಾ.ಮುರಳಿ ತಿಳಿಸಿದಂತೆ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದಂತೆ ಮನಸ್ಸಲ್ಲಿ ಧನಾತ್ಮಕತೆ ತುಂಬುವಂಥ ಪುಸ್ತಕಗಳನ್ನು ಖರೀದಿಸಿ ತಂದು ಸೂರ್ಯನಿಗೆ ನೀಡಿದಳು.

'ಇದೆಲ್ಲಾ ನಾನು ಓದ್ಬೇಕಾ..?' ಎಂದು ಹುಬ್ಬೇರಿಸಿದ.

'ಹ್ಞೂಂ.. ನಿಮ್ಗೇ..! ಬಹಳ ಮನಸ್ಸು ಕೊಟ್ಟು ಓದಿದ್ರೆ.. ತುಂಬಾ ಉಪಯೋಗವಾಗುತ್ತದೆ. ನಾನೂ ಓದ್ತೀನಿ. ಮನಸ್ಸಿನ ಮೇಲೆ ಹೆಚ್ಚು ಪರಿಣಾಮ ಬೀರುವಂಥ ಉಪಯುಕ್ತ ಪುಸ್ತಕಗಳು.. ಪುಸ್ತಕಗಳ ಜೊತೆ ಗೆಳೆತನ ಮಾಡ್ಕೊಂಡ್ರೆ ಏಕಾಗ್ರತೆ ಹೆಚ್ಚುತ್ತೆ. ನಮ್ಮ ವ್ಯಕ್ತಿತ್ವಕ್ಕೆ ಹೊಸ ಆಯಾಮ ಸಿಗುತ್ತೆ. ಮನಸ್ಸು ಹೆಚ್ಚು ಚಿಂತನಶೀಲವಾಗುತ್ತೆ. ಹೊಸ ಹೊಸ ವಿಷಯಗಳಿಗೆ ನಾವು ತೆರೆದುಕೊಳ್ತೀವಿ.. ಜೀವನ ಎದುರಿಸಲು ಇದು ಮನೋಬಲವನ್ನು ನೀಡುತ್ತೆ.. ಗೊತ್ತಾ..?' ಎಂದವಳು ಮಾತು ಕ್ಷಣ ನಿಲ್ಲಿಸಿ ಅವನನ್ನು ನೇರವಾಗಿ ನಿರುಕಿಸುತ್ತ, 'ಸೂರ್ಯ.. ಇದನ್ನೆಲ್ಲ ನಾನು ಯಾಕೆ ಮಾಡ್ತಿದ್ದೀನಿ ಅಂತ ನಿಮ್ಗೆ ಗೊತ್ತಿದೆ... ನಿಮ್ಗೆ ಇದರ ಅಗತ್ಯ ಇದೆ.. ಎಲ್ಲರಂತೆ ನೀವು ಚೆನ್ನಾಗಿ ಬಾಳ್ಬೇಕು ಅನ್ನೋದು ನಿಮ್ಮ ಸ್ನೇಹಿತೆಯಾಗಿ ನನ್ನಾಸೆ.. ಅದಕ್ಕಾಗಿ ಈ ಪ್ರಯತ್ನ.. ನಮ್ಮ ಪ್ರಯತ್ನದ ಜೊತೆಗೆ ನಿಮ್ಮ ಸಹಕಾರನೂ ಬೇಕು ಸೂರ್ಯ.. ಒಪ್ಕೋತೀರಲ್ವಾ..?' ಅವಳ ಕಂಗಳಲ್ಲಿದ್ದ ನಿವೇದನೆಗೆ ಅವನು ಸುಲಭವಾಗಿ ಕರಗಿದ್ದ.

'ಬರೀ ಸ್ನೇಹಿತೆನಾ?' ಎಂಬ ಪ್ರಶ್ನೆ ಅವನ ಮನದಲ್ಲೆದ್ದಿತ್ತು. ಅವಳ ಕಂಗಳಲ್ಲಿ ಅದರ ಉತ್ತರಕ್ಕಾಗಿ ಅರಸಿ ವಿಫಲನಾದ.

'ಆಯ್ತು.. ಓದ್ತೀನಿ' ಎಂದಾಗ ಅವಳ ಮುಖದಲ್ಲಿ ಗೆಲುವು ಮೂಡಿತು.

### ಪುಸ್ತಕ ಓದುವ ಹವ್ಯಾಸ

ಸೂರ್ಯ, ಅಪೂರ್ವಳ ಮಾತುಗಳನ್ನು ತುಸು ಹೆಚ್ಚೇ ಗಂಭೀರವಾಗಿ ಪರಿಗಣಿಸಿದ. ಅವಳು ನೀಡಿದ ಪುಸ್ತಕವನ್ನು ಓದತೊಡಗಿದಂತೆ, ಅವನನ್ನು ಆ ಬರಹಗಳು ಆಪ್ತವಾಗಿ ಸೆಳೆದಿತ್ತು. ಮೊದ ಮೊದಲು ಆಸಕ್ತಿಯಿಂದ ಓದ ತೊಡಗಿದವನು, ನಂತರ ವಿಷಯಗಳ ಆಳಕ್ಕೆ ಇಳಿದು ಗಂಭೀರನಾಗಿದ್ದ. ಕೆಲವು ಉದಾಹರಣೆಗಳು, ಉಪಕಥೆಗಳ ಮೂಲಕ ಇದ್ದ ಬರಹಗಳು ಅವನಲ್ಲಿ ಪರಿಣಾಮವನ್ನು ಬೀರಿದ್ದವು. ಆ ಪರಿಣಾಮ ಅವನ ನಡೆನುಡಿಗಳಲ್ಲಿ ಬದಲಾವಣೆಗಳನ್ನು ತಂದಿದ್ದು ಅಪೂರ್ವ ಸೂಕ್ಷ್ಮವಾಗಿ ಗಮನಿಸುತ್ತಲೇ ಇದ್ದಳು. ಅವಳಿಗೂ ಆ ಪುಸ್ತಕಗಳು ಸಹಕಾರಿಯಾದವು. ಅವಳಲ್ಲಿಯೂ ಇದ್ದ ಬಡತನದ ಬಗ್ಗೆ ಕೀಳರಿಮೆ, ಅನಾಥಪ್ರಜ್ಞೆಯ ಭಾವ ಈಗ ಅಷ್ಟಾಗಿ ಕಾಡುತ್ತಿರಲಿಲ್ಲ. ಕಾಲೇಜು, ಅಧ್ಯಯನದ ನಂತರ ಮನೆಗೆ ಬಂದಾಗ, ಈಗ ಮನೆಯ ವಾತಾವರಣ ನಿಧಾನವಾಗಿ ಬದಲಾಗತೊಡಗಿತ್ತು. ವಿಜಯಮ್ಮನಿಗೆ